

## ಪ್ರೇರಣೆ ನೀಡಿದ 'ಜಬ್ ವಿ ಮೆಟ್'

ಬಣ್ಣದ ನಂಟನ್ನು ಅಂಟಿಸಿಕೊಂಡಿದ್ದರೂ ಅನುಷ್ಕಾ ಶರ್ಮಾಗೆ ಚಿತ್ರರಂಗಕ್ಕೆ ಬರಲು ಆಸಕ್ತಿ ಇರಲಿಲ್ಲವಂತೆ. ಆಕೆಯನ್ನು ಸಿನಿಮಾದಲ್ಲಿ ನಟಿಸಲೇಬೇಕು ಎಂಬಂತೆ ಮಾಡಿದ್ದು 'ಜಬ್ ವಿ ಮೆಟ್' ಚಿತ್ರದಲ್ಲಿನ ಕರೀನಾ ಕಪೂರ್ ಪಾತ್ರ. ಇಮ್ತಿಯಾಜ್ ಅಲಿ ನಿರ್ದೇಶನದ ಈ ಚಿತ್ರ ನೋಡಿದ ಬಳಿಕ ಅನುಷ್ಕಾಗೆ ತಾನೂ ಅಂತಹ ಪಾತ್ರದಲ್ಲಿ ನಟಿಸಬೇಕು ಎಂಬ ಬಯಕೆ ಹುಟ್ಟಿತಂತೆ.

ಅನುಷ್ಕಾಗೆ ರೊಮ್ಯಾಂಟಿಕ್ ಸಿನಿಮಾಗಳೆಂದರೆ ಇಷ್ಟ. ಅದರಲ್ಲೂ ಶಾರುಖ್ ಜತೆ ರೊಮ್ಯಾಂಟಿಕ್ ಸಿನಿಮಾದಲ್ಲಿ ನಟಿಸುವುದು ಆಕೆಯ ಆಸೆ. ಮೊದಲ ಚಿತ್ರ 'ರಬ್‌ನೆ ಬನಾದಿ ಜೋಡಿ'ಯಲ್ಲಿ ಶಾರುಖ್ ಜತೆ ರೊಮ್ಯಾನ್ಸ್ ಮಾಡಲು ಅಷ್ಟು ಅವಕಾಶವಿರಲಿಲ್ಲ. 'ಜಬ್ ತಕ್ ಹೇ ಜಾನ್' ಚಿತ್ರದಲ್ಲಿ ಮತ್ತೆ ಒಂದಾಗಿ ನಟಿಸಿದರೂ, ಅಲ್ಲಿ ಅವರು ಜೋಡಿಯಾಗಿರಲಿಲ್ಲ. ಕೊನೆಗೂ ಅನುಷ್ಕಾಳ ಆಸೆ ಈಡೇರುತ್ತಿದೆ, ಶಾರುಖ್ ಜತೆ ರೊಮ್ಯಾಂಟಿಕ್ ಜೋಡಿಯಾಗಿ ಕಾಣಿಸಿಕೊಳ್ಳುವ ಅವಕಾಶ ಒಲಿದಿದೆ. ಇದಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿರುವುದು ಆಕೆಯನ್ನು ಚಿತ್ರರಂಗಕ್ಕೆ ಬರುವಂತೆ ಪ್ರೇರಣೆ ನೀಡಿದ ಇಮ್ತಿಯಾಜ್ ಅಲಿ.

'ಇಮ್ತಿಯಾಜ್ ಅಲಿ, ಪುರುಷ–ಮಹಿಳೆ ಸಂಬಂಧವನ್ನು ತೀವ್ರತರವಾಗಿ ಅರ್ಥಮಾಡಿಕೊಳ್ಳ ಸಾಮರ್ಥ್ಯವುಳ್ಳ ನಿರ್ದೇಶಕ. ಅವರ ಸಿನಿಮಾಗಳ ಪಾತ್ರಗಳಲ್ಲಿ ಅಷ್ಟೇ ಪ್ರಬುದ್ಧತೆ ಮತ್ತು ಗಟ್ಟಿತನ ಇರುತ್ತದೆ. ಅಗಾಧ ಪ್ರೀತಿ ಇರುತ್ತದೆ. ಅವುಗಳೇ ರೊಮ್ಯಾಂಟಿಕ್ ಸಿನಿಮಾಗಳ ವೈಶಿಷ್ಟ್ಯ. ಶಾರುಖ್, ರೊಮ್ಯಾನ್ಸ್‌ನ ದೊರೆ. ಇಡೀ ಪೀಳಿಗೆಗೆ ಪ್ರೀತಿಯ ಹೊಸ ವ್ಯಾಖ್ಯಾನ ನೀಡಿದ್ದು ಶಾರುಖ್' ಎಂದಿದ್ದಾಳೆ ಅನುಷ್ಕಾ.

ಸದ್ಯಕ್ಕೆ ಇನ್ನೂ ಶೀರ್ಷಿಕೆ ಇರಿಸಿದ ಚಿತ್ರದ ಚಿತ್ರೀಕರಣ ಮುಂದಿನ ತಿಂಗಳು ಪ್ರಾರಂಭವಾಗಲಿದೆ. ಈ ಚಿತ್ರ ಪ್ರೇಕ್ಷಕರಿಗೆ ವಿಶೇಷ ಅನುಭವ ನೀಡುವುದಂತೂ ಖಚಿತ ಎಂಬ ಭರವಸೆ ನೀಡಿದ್ದಾಳೆ ಅನುಷ್ಕಾ.

## ಬೋರಿಂಗ್ ಪಠ್ಯದಲ್ಲಿ ಪಾತ್ರವಾದಾಗ!

ಪೂಜಾ ಹೆಗ್ಡೆ. ಇತ್ತೀಚಿನ ದಿನಗಳವರೆಗೂ ಬಿಟೌನ್‌ನಲ್ಲಿ ಅಪರಿಚಿತವಾಗಿದ್ದ ಹೆಸರಿದು. ಈಗ ಬಾಲಿವುಡ್ ಕುತೂಹಲದಿಂದ ಆಕೆಯತ್ತ ನೋಡುತ್ತಿದ್ದೆ. ದಕ್ಷಿಣದ ಸಿನಿಮಾಗಳಲ್ಲಿ ನಟಿಸಿದ್ದರೂ ಪೂಜಾ ಇಲ್ಲಿನವರಿಗೆ ಹೆಚ್ಚು ಪರಿಚಿತಳಲ್ಲ. ಆಕೆಯನ್ನು ಏಕಾಏಕಿ ಜನಪ್ರಿಯಳನ್ನಾಗಿ ಮಾಡಿರುವುದು ಹೃತಿಕ್ ರೋಷನ್ ನಾಯಕನಾಗಿ ಅಭಿನಯಿಸಿರುವ 'ಮಹೆಂಜೊದಾರೊ' ಚಿತ್ರ. ಬಾಲಿವುಡ್‌ನಲ್ಲಿ ಅಚಾನಕ್ಕಾಗಿ ಸಿಕ್ಕ ಅವಕಾಶವನ್ನು ಬಳಸಿಕೊಳ್ಳುವ ಪ್ರಯತ್ನದಲ್ಲಿದ್ದಾಳೆ ಪೂಜಾ. 'ಮಹೆಂಜೊದಾರೊ'ದ ಟ್ರೇಲರ್ ಕೂಡ ಸಾಕಷ್ಟು ನಿರೀಕ್ಷೆಗಳನ್ನು ಹುಟ್ಟುಹಾಕಿದೆ. 'ಮಹೆಂಜೊದಾರೊ' ಸಿಂಧೂ ನಾಗರಿಕತೆಯ ಕುರಿತು ಶಾಲೆಯಲ್ಲಿ ಓದಿದವರಿಗೆ ಪರಿಚಿತವಾದ ಹೆಸರು. ಪೂಜಾ ಕೂಡ ಎಲ್ಲರಂತೆ ಶಾಲೆಯಲ್ಲಿ ಅದರ ಕುರಿತು ಓದಿದ್ದಾಳೆ. ಆದರೆ ಆಕೆಗೆ ಆಗ ಅದೊಂದು ಬೋರ್ ಹೊಡೆಸುವ ವಿಷಯವಾಗಿತ್ತಂತೆ. ಇತಿಹಾಸ ಕುರಿತು ಆಸಕ್ತಿ ಹೊಂದಿಲ್ಲದವರಿಗೆ ಇಂತಹ ವಿಷಯಗಳು ರುಚಿಸುವುದಿಲ್ಲ. ಇದೇ ಅನುಭವ ಆಕೆಗೂ ಆಗಿತ್ತು. ಅದೇ ಹೆಸರಿನ ಸಿನಿಮಾ ಮಾಡುತ್ತೇನೆ ಎಂಬುದು ಆಕೆಯ ಕಲ್ಪನೆಯಲ್ಲಿಯೂ ಬರಲು ಸಾಧ್ಯವಿರಲಿಲ್ಲ.

ಸಿನಿಮಾದ ಪ್ರಭಾವ ಈಗ ಮಕ್ಕಳ ಮೇಲೂ ಆಗುತ್ತಿದೆ ಎನ್ನುವುದು ಪೂಜಾಳ ಅಭಿಪ್ರಾಯ. ಈಗಿನ ಪೀಳಿಗೆಯವರು 'ಮಹೆಂಜೊದಾರೊ'ದ ಬಗ್ಗೆ ತಿಳಿದುಕೊಳ್ಳಲು ಇತಿಹಾಸದ ಪುಟಗಳನ್ನು ಮತ್ತೆ ತಿರುವಿ ಹಾಕತೊಡಗಿದ್ದಾರೆ. ಅದರ ಕುರಿತು ತಿಳಿದುಕೊಳ್ಳಲು ಆಸಕ್ತಿ ವಹಿಸುತ್ತಿದ್ದಾರೆ ಎಂದಿದ್ದಾಳೆ ಆಕೆ.

ಹಾಲಿವುಡ್ ಸಿನಿಮಾ ಶೈಲಿಯಲ್ಲಿರುವ 'ಮಹೆಂಜೊದಾರೊ' ಇತಿಹಾಸದ ಎಷ್ಟು ಅಂಶಗಳನ್ನು ಒಳಗೊಂಡಿದೆಯೋ ತಿಳಿದಿಲ್ಲ. ಇತಿಹಾಸಕ್ಕೂ ಅದಕ್ಕೂ ಸಂಬಂಧವಿದೆಯೇ ಎಂಬುದರ ಕುರಿತು ಚಿತ್ರತಂಡ ಬಹಿರಂಗಪಡಿಸಿಲ್ಲ. ಹೀಗಿದ್ದೂ ಸಿನಿಮಾ ಕುತೂಹಲ ಮೂಡಿಸಿರುವುದಂತೂ ಹೌದು.

■ ಅಮಿ

